◆ **ನೀವು ಕನ್ನಡ ಜಾನಪದ ಅಧ್ಯಯನದ ಬಗೆಗೂ ಹಲವಾರು ತಕರಾರುಗಳನ್ನು ಎತ್ತಿದಿರಿ. ಸಂಸ್ಕೃತಿ ಚಿಂತನೆಯ ಮೆಥಡಾಲಜಿಗಳನ್ನು ಪ್ರಶ್ನಿಸಿದಿರಿ. ಯುರೋಪಿನ ಅಧ್ಯಯನ ಮಾದರಿಗಳು ಸ್ಥಳೀಯ ಸಂಸ್ಕೃತಿಗಳ ಅಧ್ಯಯನಕ್ಕೆ ಸರಿ ಹೊಂದುವುದಿಲ್ಲವೆಂದು ನಿರ್ವಸಾಹತೀಕರಣಗೊಳ್ಳಲು ಯತ್ನಿಸಿದಿರಿ.**

ಖಂಡಿತವಾಗಿಯೂ ನಿಜ. ಜೀವಜಾಲದಲ್ಲಿ ವೈವಿಧ್ಯ ಯಾಕಿದೆ ಎನ್ನುವುದಕ್ಕೆ ಅಲ್ಲಿನ ಪರಿಸರದಲ್ಲಿ ಅನೇಕ ಕಾರಣಗಳಿವೆ. ಹಾಗೆಯೇ ನಮ್ಮ ಭಾಷೆ, ಭಾವನೆ, ಸಂವೇದನೆ, ಅರ್ಥ ಹಾಗೂ ಸಂಸ್ಕೃತಿಯ ನಡವಳಿಕೆ, ಗ್ರಹಿಕೆ, ನಂಬಿಕೆ ಎಲ್ಲವೂ ವಿಶಿಷ್ಟವಾಗಿರುತ್ತವೆ. ಅವನ್ನೆಲ್ಲ ಜ್ಞಾನದ ಒಂದೇ ಕನ್ನಡಿಯಲ್ಲಿ ಬಿಂಬಿಸಿ ಪ್ರತಿಫಲಿಸಬಾರದು. ಪ್ರತಿಯೊಂದು ಸಂಸ್ಕೃತಿಯ ಕನ್ನಡಿಯಲ್ಲೂ ಅವ್ಯಕ್ತವಾದ ತನಗೇ ಅಗತ್ಯವಾದ ಜ್ಞಾನಲೋಕವಿರುತ್ತದೆ. ಯುರೋಪಿನ ಯಾಜಮಾನ್ಯ ಕನ್ನಡಿ ತನ್ನ ಮೇಲರಿಮೆಯಿಂದ ಎಲ್ಲವನ್ನು ಸೀಮಿತಗೊಳಿಸಿಬಿಡುತ್ತದೆ. ಇದಕ್ಕೆ ನೂರಾರು ಸಿದ್ಧಾಂತಗಳಿವೆ. ಈಗಲೂ ನಮ್ಮ ಯೂನಿವರ್ಸಿಟಿಗಳು ಅದೇ ದೊಡ್ಡಣ್ಣನ ಕನ್ನಡಿ ಹಿಡಿದುಕೊಂಡೇ ತಮ್ಮ ಮುಖಕ್ಕೆ ಕಪ್ಪು ಬಳಿದುಕೊಂಡಿರುತ್ತವೆ. ಇಂಥಲ್ಲೇ ನಾವು ನಮ್ಮ ಅರಿವಿನ ಪಠ್ಯವನ್ನು ಸಮುದಾಯಗಳ ಭಾಗವಾಗಿ ಪುನರ್‌ಸೃಷ್ಟಿಸಿಕೊಳ್ಳಬೇಕು. ಇದು ಬಹಳ ಕಷ್ಟ. ಈಗಂತೂ ವಿಶ್ವವಿದ್ಯಾಲಯಗಳಲ್ಲಿ ಯೋಗ್ಯ ಪ್ರಾಧ್ಯಾಪಕರೇ ಇಲ್ಲ. ಬೆರಳೆಣಿಕೆ ವಿದ್ವಾಂಸರಿಂದ ಎಲ್ಲ ಆಗದು. ಪಠ್ಯಕ್ರಮಗಳೂ, ಕಲಿಸುವ ವಿಧಾನಗಳೂ ನಕಲಿಯಾಗಿವೆ. ಸಂಶೋಧನೆಯ ಗುಣಮಟ್ಟ ಸತ್ತು ಬಹಳ ಕಾಲವಾಗಿದೆ. ಸಂಶೋಧನೆಯಲ್ಲಿ ಸೃಜನಶೀಲ ಹೊಳಹು, ಕಾಣ್ಕೆಗಳನ್ನು ರೂಢಿಸಿಕೊಳ್ಳಬೇಕು. ಅದಕ್ಕಾಗಿ ಜಾತ್ಯತೀತ ಅಧ್ಯಯನದ ಸಮಷ್ಟಿ ಪ್ರಜ್ಞೆ ಬರಬೇಕು. ವಿಜ್ಞಾನದ ಸಂಶೋಧನೆಗಳ ಕಿಂಚಿತ್ತಾದರೂ ಅರಿವು ಸಮಾಜ ವಿಜ್ಞಾನಿಗಳ ವಿದ್ಯಾರ್ಥಿಗಳಿಗೆ ಇರಬೇಕು. ಸಂಶೋಧನೆಯಲ್ಲಿ ತೊಡಗಿದವರು ಇಲ್ಲೆಲ್ಲೋ ನನ್ನ ವಿಮೋಚನೆ ಇದೆ ಎಂದು ಹಂಬಲಿಸಿ ಕನಸಬೇಕು. ಅಂಬೇಡ್ಕರ್ ಅವರ ಸಂಶೋಧನಾ ಬರಹಗಳಲ್ಲಿ ಇಂತಹ ದಾರಿಗಳು ಅಡಗಿವೆ. ಬುದ್ಧತ್ವವನ್ನು ಸಂಶೋಧನೆಯಲ್ಲಿ ಅಳವಡಿಸಿಕೊಳ್ಳುವ ಅನಿವಾರ್ಯತೆ ಇದೆ.

ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಾಹಿತಿ ಮಾತ್ರ ಆಗಿದ್ದರೆ ಅವರಿಗೆ ನೊಬೆಲ್ ಬಹುಮಾನ ಬಂದು ಬಿಡುತ್ತಿತ್ತು. ರವೀಂದ್ರನಾಥ ಟ್ಯಾಗೋರ್ ಸೃಜನಶೀಲ ಲೇಖಕರು ಸರಿ. ಅವರು ಬ್ರಿಟಿಷರಿಗೆ ಹತ್ತಿರ ಇದ್ದುದರಿಂದ ನೊಬೆಲ್ ಸಿಕ್ಕಿತು. ಅಂಬೇಡ್ಕರ್ ಅವರಿಗೆ ಕಥೆ ಕಾದಂಬರಿ ಬರೆಯುವುದು ಕಷ್ಟವೇನಿರಲಿಲ್ಲ. ನೇರವಾಗಿ ವೈಚಾರಿಕವಾಗಿ ಸಾಮಾಜಿಕ ನ್ಯಾಯದ ಸಂಶೋಧನೆಯಲ್ಲಿ ಮುಳುಗಿ ನನ್ನಂಥ ಸಾವಿರಾರು ಲೇಖಕರಿಗೆ ಮಾರ್ಗ ತೋರಿದರು. ಹೀಗಾಗಿ ನಾನು ಸೃಜನಶೀಲ ಪ್ರಕಾರಗಳನ್ನು ಸ್ವಲ್ಪ ಸುಮ್ಮನಿರಿ ಎಂದು ಅಂಬೇಡ್ಕರ್ ಪ್ರಭಾವದಿಂದ ಹಾಗೂ ಮಾನವಿಕ ವಿಜ್ಞಾನಗಳಲ್ಲಿ ತೊಡಗಿದ ಪಶ್ಚಿಮದ ಚಿಂತಕರನ್ನೆಲ್ಲ ತುಂಬಿಕೊಂಡು ಸಾಹಿತ್ಯ ಮೀಮಾಂಸೆಯ ಮಾನದಂಡಗಳ ದಾಟಿ ಸಮುದಾಯಗಳ ಸಮಷ್ಟಿ ಪ್ರಜ್ಞೆಯನ್ನು ರೂಪಿಸಿದೆ. ಕಥೆ, ಕಾವ್ಯ, ಕಾದಂಬರಿ, ಪ್ರಬಂಧಗಳನ್ನು ಬರೆದಾಗ ಸಿಗುವ ಸಂತೋಷಕ್ಕಿಂತ ಸಾಹಿತ್ಯೇತರ ಸಂಗತಿಗಳ ಬರಹದಲ್ಲಿ ಹೆಚ್ಚಿನ ಸಂತೋಷ ಪಡೆದೆ. 'ದಲಿತರು ಮತ್ತು ಜಾಗತೀಕರಣ', 'ಜಾಗತೀಕರಣ ಮತ್ತು ಜಾನಪದ' ಕೃತಿಗಳನ್ನು ಒಮ್ಮೆ ಗಮನಿಸಿ. ನಾನು ಆ ಬರಹಗಳಲ್ಲಿ ಏನನ್ನು ಸಮರ್ಥಿಸುತ್ತಿರುವೆನೆಂಬುದು ತಿಳಿಯುತ್ತದೆ. ಸಮಾಜ ವಿಜ್ಞಾನಗಳು ನೋಡಲಾರದೆ ಬರೆಯಲಾರದೆ ಬಿಟ್ಟಿದ್ದನ್ನು ನಾನು ಒಬ್ಬ ಸಮಾಜ ವಿಜ್ಞಾನಿಯಾಗಿಯೂ ಚಿಂತಿಸಿರುವೆ.

ಸಂಶೋಧನೆಯ ನೆಲೆಯಲ್ಲಿ ನಾನು ನನ್ನದೇ ದಾರಿ ಕಂಡುಕೊಂಡೆ. ಸೃಜನಶೀಲ ಕಾಣ್ಕೆಯ ಸಮುದಾಯ ನಿಷ್ಠವಾದ ಸಮಕಾಲೀನದ ಜೊತೆಗೆ ಗತಕಾಲವನ್ನು ಮುಖಾಮುಖಿ ಮಾಡಿಸುವ ಸ್ವೋಪಜ್ಞತೆ ವಿಧಾನವನ್ನು ಕಂಡುಕೊಂಡೆ. ಕನ್ನಡದ ಸಂಶೋಧನೆ ಬಹಳಷ್ಟು ಬೂಸಾ ಸಂಶೋಧನೆಯಾಗಿದೆ. ಹಿಂದಿನವರು ಅಪಾರವಾಗಿ ಅಸಲಿ ಮಾಹಿತಿಯನ್ನು ತಂದು ಜೋಡಿಸುತ್ತಿದ್ದರು. ಈಗಂತೂ ವಿಶ್ವವಿದ್ಯಾಲಯಗಳಲ್ಲಿ ಪದವಿಗಾಗಿ ನಡೆಯುತ್ತಿರುವ ಸಂಶೋಧನೆಗಳನ್ನು ಗಮನಿಸಿದರೆ ಅಸಹ್ಯ ಎನಿಸುತ್ತದೆ. ಮಾರ್ಗದರ್ಶಕರೂ ಹಣ ಪಡೆದು ಪಿಎಚ್.ಡಿ ಪ್ರಬಂಧಗಳಿಗೆ ಸಹಿ ಮಾಡುತ್ತಾರೆ. ಇದನ್ನು ಮಾತಾಡುವುದೇ ಹೇಸಿಗೆ